**ಕರ್ನಾಟಕ ವಿಧಾನಸಭೆ**
**ಹದಿನಾರನೇ ವಿಧಾನಸಭೆ**
**ಮೊದಲನೇ ಅಧಿವೇಶನ**
**(ಮುಂದುವರೆದ ಉಪವೇಶನ)**

# ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 2023

**(2023ರ ವಿಧಾನಸಭೆಯ ವಿಧೇಯಕ ಸಂಖ್ಯೆ–12)**

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ನ್ನು ಮತ್ತಷ್ಟು ತಿದ್ದುಪಡಿ ಮಾಡುವ ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡು ಬರುವ ಉದ್ದೇಶಗಳಿಗಾಗಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 (1959ರ ಕರ್ನಾಟಕ ಅಧಿನಿಯಮ ಸಂ. 11)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 2023 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 128ಎ ಹೊಸ ಪ್ರಕರಣದ ಸೇರ್ಪಡೆ.-** ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 (1959ರ ಕರ್ನಾಟಕ ಅಧಿನಿಯಮ ಸಂ. 11)ರ 128ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**128ಎ. ಸಾಮಾನ್ಯ ವೃಂದದ ರಚನೆ.-** (1) ಈ ಅಧಿನಿಯಮದಲ್ಲಿ, ನಿಯಮಗಳಲ್ಲಿ ಅಥವಾ ಉಪವಿಧಿಗಳಲ್ಲಿ ಏನೇ ಅಡಕವಾಗಿದ್ದರೂ, ರಿಜಿಸ್ಟ್ರಾರನು ಸಹಕಾರ ಚಳುವಳಿಯ ಹಿತಾಸಕ್ತಿಯಲ್ಲಿ, ಯಾವುದೇ ವರ್ಗದ ಸಹಕಾರ ಸಂಘಕ್ಕಾಗಿ ನೌಕರರ ವೃಂದವನ್ನು ರಚಿಸುವುದು ಅವಶ್ಯವೆಂದು ಪರಿಗಣಿಸಿದರೆ, ಆ ಸಹಕಾರ ಸಂಘಗಳ ವರ್ಗವು ಸಂಯೋಜಿತವಾಗಿರುವ ಒಂದು ಅಥವಾ ಹೆಚ್ಚು ಒಕ್ಕೂಟ ಸಂಘಗಳಿಗೆ, ತಾನು ನಿರ್ದಿಷ್ಟಪಡಿಸಬಹುದಾದಂಥ ಸಹಕಾರ ಸಂಘಗಳ ವರ್ಗದ ಅಂಥ ನೌಕರರ ಪ್ರವರ್ಗಗಳ ಸಂಬಂಧದಲ್ಲಿ ನೇಮಕಾತಿ, ವರ್ಗಾವಣೆ ಮತ್ತು ಶಿಸ್ತು ಕ್ರಮಗಳನ್ನು ಕುರಿತ ಅಧಿಕಾರವನ್ನು ಚಲಾಯಿಸಲು ಅಧಿಕಾರ ನೀಡತಕ್ಕುದು ಮತ್ತು ಸದರಿ ಉದ್ದೇಶವನ್ನು ಜಾರಿಗೆ ತರಲು ಅವಶ್ಯವಾಗಬಹುದಾದಂಥ ವಿನಿಯಮಗಳನ್ನು ರಚಿಸತಕ್ಕದ್ದು. ಅಂಥ ಒಕ್ಕೂಟದ ಸಂಘಗಳಿಗೆ

ರಿಜಿಸ್ಟ್ರಾರನು ಹಾಗೆ ಅಧಿಕಾರ ನೀಡಿರುವಲ್ಲಿ, ಸಂಯೋಜಿತ ಸಹಕಾರ ಸಂಘಗಳು, ವಿನಿಯಮಗಳು ಅವಕಾಶ ನೀಡುವಷ್ಟರಮಟ್ಟಿಗೆ ಹೊರತು ಅಂಥ ನೌಕರರ ಪ್ರವರ್ಗಗಳನ್ನು ಕುರಿತು ವ್ಯವಹರಿಸಲು ಅಧಿಕಾರವನ್ನು ಹೊಂದಿರತಕ್ಕದ್ದಲ್ಲ.

(2) ರಿಜಿಸ್ಟ್ರಾರನು, ಈ ಉದ್ದೇಶಕ್ಕಾಗಿ ಒಕ್ಕೂಟ ಸಂಘವು ವಹಿಸಬಹುದಾದ ಅಥವಾ ವಹಿಸಿರುವ ವೆಚ್ಚ ಭರಿಸಲು ಅಂಥ ಮೊಬಲಗನ್ನು ಪ್ರತಿ ವರ್ಷವೂ ವಂತಿಗೆ ನೀಡಲು ಸಂಯೋಜಿತ ಸಹಕಾರ ಸಂಘಗಳನ್ನು ಅಗತ್ಯಪಡಿಸುವ ಅಧಿಕಾರವನ್ನು ಹೊಂದಿರತಕ್ಕದ್ದು. ರಿಜಿಸ್ಟ್ರಾರನು ನಿರ್ದಿಷ್ಟಪಡಿಸಬಹುದಾದಂಥ ಮೊಬಲಗನ್ನು ಅಂಥ ಪ್ರಾಧಿಕಾರಕ್ಕೆ ಮತ್ತು ಆತನು ನಿರ್ದಿಷ್ಟಪಡಿಸಿದ ಸಮಯದೊಳಗೆ ಸಂದಾಯಮಾಡಲು ಯಾವುದೇ ಸಹಕಾರ ಸಂಘವು ತಪ್ಪಿದಲ್ಲಿ, ರಿಜಿಸ್ಟ್ರಾರನು ಆ ಪ್ರಾಧಿಕಾರವು ಸಲ್ಲಿಸಿದ ಅರ್ಜಿಯ ಮೇಲೆ ಹಾಗೂ ತಾನು ಅವಶ್ಯವೆಂದು ಪರಿಗಣಿಸಬಹುದಾದಂಥ ವಿಚಾರಣೆ ನಡೆಸಿದ ತರುವಾಯ, ಮೊಬಲಗನ್ನು ಸಂದಾಯ ಮಾಡುವಂತೆ ಸಹಕಾರ ಸಂಘವನ್ನು ಅಗತ್ಯಪಡಿಸುವ ಆದೇಶವನ್ನು ಮಾಡಬಹುದು, ಮತ್ತು ಅಂಥ ಪ್ರತಿಯೊಂದು ಆದೇಶವು 71ನೇ ಪ್ರಕರಣದ ಮೇರೆಗಿನ ಐತೀರ್ಪು ಆಗಿದ್ದರೆ ಹೇಗೋ ಹಾಗೆ ಆ ಸಹಕಾರ ಸಂಘದ ವಿರುದ್ಧ ಜಾರಿಯೋಗ್ಯವಾಗಿರತಕ್ಕದ್ದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳ ನಿರೀಕ್ಷಣೆಯಲ್ಲಿರುವ ನೌಕರರಿಗೆ ಸ್ಥಳನಿಯುಕ್ತಿಗೊಳಿಸಲು ಮತ್ತು ಅವರ ಇತರ ಸೇವಾ ಷರತ್ತುಗಳನ್ನು ಇತ್ಯರ್ಥಪಡಿಸಲು ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮ, 1959 (1959ರ ಕರ್ನಾಟಕ ಅಧಿನಿಯಮ 11)ಕ್ಕೆ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ, ಈ ವಿಧೇಯಕ.

ಆದ್ದರಿಂದ ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಕ್ಯಾತಸಂದ್ರ ರಾಜಣ್ಣ**
ಸಹಕಾರ ಮಂತ್ರಿ
ಕೃಷಿ ಮಾರುಕಟ್ಟೆ ಹೊರತುಪಡಿಸಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು, ಪಿ7, ಕಾಸೂ , ಪ್ರತಿಗಳು 600, 17ನೇ ಜುಲೈ, 2023

**KARNATAKA LEGISLATIVE ASSEMBLY**
**SIXTEENTH LEGISLATIVE ASSEMBLY**
**FIRST SESSION**
**(Adjourned Meeting)**

# THE KARNATAKA CO-OPERATIVE SOCIETIES (AMENDMENT) BILL, 2023

**(LA Bill No. 12 of 2023)**

A Bill further to amend the Karnataka Co-operative Societies Act, 1959.

Whereas, it is expedient further to amend the Karnataka Co-operative Societies Act, 1959 (Karnataka Act No.11 of 1959) for the purposes hereinafter appearing.

Be it enacted by the Karnataka State Legislature in the seventy fourth year of the Republic of India as follows:-

**1. Short title and commencement.-** (1) This Act may be called the Karnataka Co-operative Societies (Amendment) Act, 2023.

(2) It shall come into force at once.

**2. Insertion of new section 128A.-** In the Karnataka Co-operative Societies Act, 1959 (Karnataka Act No.11 of 1959), after section 128, the following shall be inserted, namely,-

"**128-A. Constitution of a common cadre.-** (1) Notwithstanding anything contained in this Act, the rules or the bye-laws, where the Registrar, in the interest of the co-operative movement, considers that the creation of a common cadre of employees for any class of co-operative societies is necessary, he shall authorise one or more federal societies to which such class of co-operative societies is affiliated to exercise the power of appointment, transfer and disciplinary action in respect of such categories of employees of that class of co-operative societies as may be specified by him and make such regulations as may be necessary for carrying out the said purpose. Where such federal society is so authorised by the Registrar, the affiliated co-operative societies shall not have powers to deal with such categories of employees except to the extent the regulations may permit.

(2) The Registrar shall have power to require the affiliated co- operative societies to make contribution of such sum every year towards expenditure, as the federal society is likely to incur or has incurred for the purpose. If any co-operative society fails to pay the said sum to such authority as may be specified by the Registrar and within the time fixed by him, the Registrar may on the application of the authority, and after such enquiry as he may consider necessary, make an order requiring the co-operative society to pay the amount, and every such order shall be enforceable against the co-operative society as if it were and award under section 71."

## STATEMENT OF OBJECTS AND REASONS

It is considered necessary to amend the Karnataka Co-operative Societies Act, 1959 (Karnataka Act 11 of 1959) to constitute a common cadre of employees for any classes of co-operative societies. Constitution of a common cadre is essential to reduce the cases of misappropriation of money in the Primary Agricultural Co-Operative societies. It will help the Chief Executive Officers/Secretary to provide high quality service to the farmers and milk producers impartially without being under any pressure from the governing body.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**KYATHASANDRA N.RAJANNA**
Minister for Co-operation excluding
Agriculture Marketing

**M.K. VISHALAKSHI**
Secretary
Karnataka Legislative Assembly

Govt. Press, Vikasa Soudha, Bengaluru, 17th July, 2023, P7, W.D. , Copies 600